ಒಂದಿಷ್ಟು ನೆರವಾಗೋದಕ್ಕಷ್ಟೆ ನನಗೆ ಹಾಡುಗಾರಿಕೆ ಬೇಕಿತ್ತು. ಅದರಿಂದ ಬದುಕು ಸಾಗುವುದಿಲ್ಲವೆಂಬ ಅರಿವಿತ್ತು. ಆದರೆ ಅವಳು ನನ್ನ ಬಗ್ಗೆ ದೊಡ್ಡ ಕನಸನ್ನು ಕಟ್ಟಿಕೊಂಡ ಪರಿಗೆ ದಿಗಿಲುಗೊಂಡಿದ್ದೆ.

ನಾನು ಬರೆವ ಕವನಗಳೀಗ ಪತ್ರಿಕೆಗಳಲ್ಲಿ ಬರಲಾರಂಭಿಸಿದಾಗ ಗೆಲುವಾದೆ. ಮನೆಗೆ ಎಲ್ಲಾ ಮ್ಯಾಗಜೀನ್ ತರಿಸುವ ಅವಳಿಗಂತೂ ನನಗಿಂತ ಹೆಚ್ಚು ಖುಷಿ. 'ನೋಡ್ರೆ, ನನ್ನನ್ನೇ ಕೇಂದ್ರ ಬಿಂದುವಾಗಿಟ್ಟುಕೊಂಡು ಕವನ ಗೀಚಿ ದೊಡ್ಡ ಕವಿಯಾಗಿ ಬಿಟ್ಟ' ಎಂದವಳು ಗೆಳತಿಯರ ಎದುರೇ ನನ್ನ ಕೆನ್ನೆಗೆ ತಿವಿದು ಸಡಗರಪಡುತ್ತಿದ್ದುದ್ದರಿಂದ ಮತ್ತಷ್ಟು ಆಸಕ್ತಿಯಿಂದ ಕವನಗಳನ್ನು ಬರೆದೆ. ಪತ್ರಿಕೆಗಳವರು ಪ್ರಕಟಿಸಿದಾಗ ಉಬ್ಬಿಹೋದೆ. 'ಅಯ್ಯೋ! ಈ ಅಬ್ಸರ್ಡ್ ಗೀತೆಗಳಿಂದ ಏನ್ರಿ ಪ್ರಯೋಜನ? ಭಾವನಾತ್ಮಕವಾಗಿ ಕೆ.ಎಸ್.ನ ತರಾ ಬರೀರಿ. ಪೇಪರಲ್ಲಿ ಬಂದ್ರೆ ಏನು ಸಂಭಾವನೆ ಕೊಟ್ಟಾರು? ಸಿನಿಮಾಗಳಿಗಾದ್ರೂ ಹಾಡು ಬರೆಯೋಕೆ ಟ್ರೈ ಮಾಡ್ರಿ. ನೇಮು, ಫೇಮು, ಮನಿ ಎಲ್ಲಾ ಅಟ್ ಎ ಟೈಮ್ ಸಿಗುತ್ತೆ' ಅನ್ನುತ್ತಾ ಉಬ್ಬಿಹೋದ ನನ್ನನ್ನು ಪಂಕ್ಚರ್ ಮಾಡುತ್ತಿದ್ದಳು. ನನ್ನ ಕ್ಲರ್ಕ್‌ಗಿರಿ, ಆಫೀಸಿನ ಪ್ರಸಂಗಗಳನ್ನು ಹೇಳಿದರೆ ಅವಳು ಆಕಳಿಸುವ ಪರಿಗೆ ನಾನು ಫೇಡ್‌ಔಟ್. ನನ್ನ ಪುಟ್ಟ ಮನೆಗೂ ಬರುತ್ತಿದ್ದಳು. ಅಮ್ಮನೆಲ್ಲಾದರೂ ಸಿನಿಮಾಕ್ಕೆ ಹೋಗಿದ್ದರೆ ಪುಟ್ಟ ಮನೆಯಲ್ಲೇ ಅಂಟಿಕೊಳ್ಳುತ್ತಿದ್ದಳು. ಮುತ್ತಿಡಿಸಿಕೊಳ್ಳುತ್ತಿದ್ದಳು. ಅದಕ್ಕಿಂತ ಹೆಚ್ಚಿಗೆ ಮುಂದುವರೆವ ಧೈರ್ಯ ನನಗೂ ಇರಲಿಲ್ಲ. ಹೇಗೂ ಮದುವೆಯಾಗುತ್ತೇವಲ್ಲ ಎಂಬ ಭರವಸೆ. ಅವಳು ಮನೆಗೆ ಬರುವ ವಿಷಯ ನೆರೆಯವರಿಂದ ಅರಿತ ಅಮ್ಮ ಕೆಂಡವೋ ಕೆಂಡ. 'ನಾನಿಲ್ಲದಿರುವಾಗ ಯಾಕೆ ಬರ್ತಾಳೆ? ಏನು ಮಾಡ್ತೀರಾ? ಇದು ಸಂಸಾರಸ್ಥರ ಮನೆ' ಎಂದೆಲ್ಲಾ ಹರಿಹಾಯುತ್ತಿದ್ದಳು. 'ಹೇಗೂ ಒಂದು ಕೆಲಸ ಸಿಗ್ತು. ಮದುವೆ ಆಗಿ ಬಿಡೋ ಬೇರೆಯವರ ನಾಲಿಗೆ ಮೇಲೆ ಬಿದ್ದು ಬೇಯ್ಸಬೇಡ' ಎಂದು ತಿದಿ ಒತ್ತಲಾರಂಭಿಸಿದಳು.

ತಿಂದ ಅನ್ನ ರುಚಿಸಿದಂತಾಗಿ ಅವಳೆದುರು ಪ್ರಸ್ತಾಪಿಸಿದೆ. ಗೊಳ್ಳನೆ ನಕ್ಕು ಬಿಟ್ಟಿದ್ದಳು. 'ನಮ್ಮಲ್ಲಿ ಇಷ್ಟೊಂದು ಜಾತಿ ಅಂತರವಿರುವಾಗ ಮದುವೆ ಹ್ಯಾಗೆ ಸಾಧ್ಯ?!' ಎಂದು ಹುಬ್ಬೇರಿಸಿದ್ದಳು. 'ಹಾಗಾದ್ರೆ ಈ ನಮ್ಮ ಪ್ರೇಮ? ಇದಕ್ಕೇನರ್ಥ?' ಎಂದು ಸಿಡುಕಿದ್ದೆ. 'ಪ್ರೇಮಕ್ಕೆ ಅರ್ಥವೇ ಇರೋದಿಲ್ಲ'. ತುಟಿ ಕಚ್ಚಿ ಮಾದಕವಾಗಿ ನಕ್ಕಳು. 'ಹಾಗಾದ್ರೆ... ಪ್ರೇಮದ ಬಗ್ಗೆ ಪವಿತ್ರವಾದ ಭಾವನೆ ನಿನಗೆ?' ಮಾತು ನಿಲ್ಲಿಸಿ ಮುಖ ನೋಡಿದೆ. ಮತ್ತದೇ ನಗೆ. 'ಇದೆ. ಗಂಗೆಯಷ್ಟು ಪರಿಶುದ್ಧ... ಓಕೆನಾ?' ಮತ್ತೆ ನಕ್ಕಳು.

'ಅಂದ್ರೇ?' ಅವಳ 'ಓಕೆ' ನನಗರ್ಥವಾಗದೆ ದುರುಗುಟ್ಟಿದೆ. 'ಅಂದ್ರೆ, ಅದೇರಿ ಬಣ್ಣವಿಲ್ಲ, ರುಚಿಯಿಲ್ಲ, ವಾಸನೆಯಿಲ್ಲ. ಅವರವರ ಹೃದಯದ ಆಳ ಹರವುಗಳ ಪ್ರಕಾರ ಆಕಾರ ತಾಳುತ್ತೆ'.

'ಅದು ನೀರು... ನೀರಿನ ಲಕ್ಷಣ' ನಾನವಳನ್ನು ತಿದ್ದಿದೆ. 'ಶ್ಯೂರ್, ಬಾಯಾರಿದಾಗ ನೀರು ಬೇಕು.



ಹರೆಯದ ಭಾವಗಳನ್ನು ಬೆಚ್ಚಗಾಗಿರಿಸಲು ಪ್ರೇಮ ಬೇಕು. ನಾಟ್ ಮಚ್ ಡಿಫರೆನ್ಸ್... ಅದನ್ನು ನೀವು ಕೊಟ್ಟಿರಿ. ನೀವಲ್ಲದಿದ್ದರೆ ಸಮ್‌ಬಡಿ. ಬಟ್ ಯು ಆರ್ ಸೋ ಲಕ್ಕಿ' ರಾಗವಾಗಿ ನಕ್ಕು ತಬ್ಬಿ ಗಾಢವಾಗಿ ಚುಂಬಿಸಿದಳು. 'ತಲೆ ಕೆಡಿಸ್ಕೋ ಬೇಡಿ, ಅಡಿಗರಂತೆ, ರಾಮಾನುಜರಂಗೆ ದೊಡ್ಡ ಕವಿ ಆಗೋಕೆ ತಲೆ ಕೆಡಿಸಿಕೊಳ್ಳಿ... ನನ್ನ ಬಗ್ಗೆ ಅಲ್ಲ' ಎಂದಳು.

'ಅಲ್ಲ ಕಣೆ, ಪ್ರೇಮಿಸುವಾಗ ಇಲ್ಲದ ಜಾತಿ ಈಗೆಲ್ಲಿಂದ ಬಂತೆ?' ಸ್ವರಣೆಗೆಟ್ಟು ಕೂಗಿದೆ.

'ನಾನ್‌ಸೆನ್ಸ್, ಪ್ರೇಮಿಸೋಕೆ ಎರಡು ಜೀವ ಸಾಕು. ಮದುವೆ ಸಂಸಾರವೆಂದಾಗ ದುಡ್ಡು, ಕಾಸು, ಕಾರು, ಬಂಗ್ಲೆ ಎಲ್ಲಾ ಫೆಸಿಲಿಟೀಸ್ ಇರೋ ಜೀವ ಬೇಕು'.

'ಹಾಗಾದ್ರೆ ನನ್ನ ಜೊತೆ ಮುತ್ತಿಟ್ಟಿದ್ದು? ಉರುಳಾಡಿದ್ದು?' ಕಿಡಿಕಿಡಿಯಾದೆ. ತಟ್ಟನೆ ಅವಳ ಕಾಲಬದಿ ಸುತ್ತಾಡುವ ನಾಯಿಮರಿಗಳನ್ನೆತ್ತಿ ಅಪ್ಪಿ ಮುದ್ದಾಡಿದಳು. 'ಆಫ್‌ಕೋರ್ಸ್... ಹೀಗೆ ಅಲ್ವಾ? ಪ್ರೀತಿಸೋದು ತಪ್ಪಾ? ಪ್ರೀತಿಗೆ ಚೌಕಟ್ಟಿಲ್ಲ. ಬಿಡಿಗಾಸು ದುಡಿಯದವನೂ ಪ್ರೇಮಿಯಾಗಬಲ್ಲ. ಆಗ್ಲೇ ಹೇಳಿದ್ನಲ್ಲ ಗಂಡನಾಗೋಕೆ ಕೆಲವು ಅರ್ಹತೆಗಳು ಅವಶ್ಯಬೇಕು. ಇಟ್ ಈಸ್ ಮೈ ಪ್ರಿನ್ಸಿಪಲ್'.

ಕೆನ್ನೆಗೆ ಬಾರಿಸುವಷ್ಟು ಬಂದ ಕೋಪವನ್ನು ಅದುಮಿಟ್ಟುಕೊಂಡೆ. 'ನೋಡೋ ಮೈ ಪೂರ್‌ಬಾಯ್. ಪ್ರೇಮದ ಜೊತೆ ಹುಡುಗಾಟವಾಡಬಹುದು. ಜೀವನದ ಜೊತೆ ಹುಡುಗಾಟವಾಡಬಾರ್ದು. ಮಪ್ಪಾದಮೇಲೂ ಜೊತೆಗಿರೋದ್ರಿಂದ ಜೀವನಕ್ಕೆ ಭದ್ರತೆ ಬೇಕಲ್ವಾ? ಇಟ್ ಈಸ್ ಮೈ ಸಿನ್ಸಿಯರ್ ಒಪೀನಿಯನ್' ಎಂದು ನಾಯಿಗಳನ್ನು ದೂರ ತಳ್ಳಿ ಕಾಲಿಂದ ದೂಡಿದಳು. ಮಾತನಾಡಲು ನನ್ನಲ್ಲಿನ ಶಕ್ತಿ ಇಮರಿಹೋಗಿತ್ತು. ಎದ್ದು ಬಂದವನು ಮತ್ತೊಂದೂ ಅವಳನ್ನು ನೋಡುವ ಪಾಪ ಮೂಡಿರಲಿಲ್ಲ.

ಕೆಲವೇ ತಿಂಗಳಲ್ಲಿ ಅವಳ ಮದುವೆ ಜ್ಯೂಯಲರಿ ಮಾರ್ಟ್‌ನ ಒಡೆಯನೊಡನೆ ಫಿಕ್ಸ್ ಆಗಿದೆಯೆಂದು ನನ್ನ ಆರ್ಕೆಸ್ಟ್ರಾ ಗೆಳೆಯರು ಹೇಳಿದರು. ನಕ್ಕು ಬಿಟ್ಟೆ. 'ಅರೆ! ನಗ್ತಿಯಲ್ಲೋ? ಮತ್ತೆ ನಿಮ್ಮ ಲವ್ವು?' ಅವರ ಮುಖಗಳೇ ಪ್ರಶ್ನೆಗಳಾದವು.

ಅದೇ ವಾರದಲ್ಲಿ ಅವಳೇ ಅವರಮ್ಮನ ಜೊತೆ ಮನೆಗೆ ಬಂದು ವೆಡ್ಡಿಂಗ್ ಕಾರ್ಡ್ ಕೊಟ್ಟಳು. ಅಮ್ಮನಿಗೊಂದು, ನನಗೊಂದು ಭಾರವಾದ ಪ್ಯಾಕೇಟ್ ಕೊಟ್ಟಳು. 'ಆರತಕ್ಷತೆ ಇದೆ ಬನ್ನಿ. ಸಂಜೆ ಬೆಂಗಳೂರಿನವರ ಆರ್ಕೆಸ್ಟ್ರಾ ಅರೇಂಜ್ ಮಾಡಿದ್ದೇವೆ. ಪ್ರೋಗ್ರಾಮ್ ಕೇಳಲಾದರೂ ಬರ್‍ಲೇಬೇಕು. ರಾಜೇಶ್‌ಕೃಷ್ಣ, ಅನನ್ಯಾ ಹಾಡ್ತಾರೆ. ಮಿಸ್ ಮಾಡ್ಬೇಡಿ' ಅಂದಿದ್ದು ಅವಳ ತಾಯಿ. ಅವರು ಎದ್ದು ಹೋದರೂ ಮನೆ ತುಂಬಾ ಪರ್‌ಫ್ಯೂಮ್ ಹರಡಿತ್ತು.

'ಏನೋ ಇದು ಕಂದಾ! ಬೇಜಾರಾಯ್ತೇನೋ' ಅಮ್ಮ ಕೇಳಿ ನಿಟ್ಟುಸಿರಾದಳು'.

'ಇಲ್ಲಮ್ಮ, ಆರ್ಕೆಸ್ಟ್ರಾ ಕೇಳೋಕೆ ಹೋಗೋಣ್ವೆ' ಎಂದು ನಗೆಯಾಡಿದೆ. ಅಮ್ಮ ಪ್ಯಾಕೇಟ್ ಬಿಚ್ಚಿ ನೋಡಿದಳು ಕುತೂಹಲದಿಂದ. ಅಮ್ಮನಿಗೊಂದು ಮೈಸೂರ್‌ಸಿಲ್ಕ್ ಸೀರೆ. ನನಗೆ ಸೂಟ್ ಬಟ್ಟೆ! ಋಣಸಂದಾಯವಾಯಿತಲ್ಲ ಎಂದುಕೊಂಡೆ. ನಿಟ್ಟುಸಿರೂ ಹೊರಬರಲಿಲ್ಲ!

ಅವಳ ಆರತಕ್ಷತೆಗೆ ಹೋಗಿ ಭಗ್ನ ಹೃದಯಿ ಸಿನಿಮಾ ಹಿರೋನಂತೆ ಹಾಡಿ ಸೇಡು ತೀರಿಸಿಕೊಳ್ಳದೆ ಯಾವುದೋ ಥಿಯೇಟರಲ್ಲಿ ಕತ್ತಲಲ್ಲಿ ಕೂತು ಕಳೆದುಹೋಗುತ್ತಿರುವ ಪ್ರೇಮಕ್ಕೆ ಅಶ್ರುತರ್ಪಣವನಿಟ್ಟೆ. ಅವಳಿಗಾಗಿಯೇ ಬರೆದೆ. ರಾಗ ಹಾಕಿ ಹಾಡಿದೆ. ಕುಣಿದೆ, ಸಿಕ್ಕವರೊಂದಿಗೆ ಬೀದಿಯಲ್ಲಿ ಬಡಿದಾಡಿದೆ ಊರಿನ ಜನ ಪೋಲಿಪಟ್ಟ ಕಟ್ಟಿದರು. ಇಷ್ಟೆಲ್ಲಾ ಸ್ಟ್ರಗಲ್ ಮಾಡಿದ್ದು ಪ್ರೇಮಕ್ಕಾಗಿ. ಇದರಲ್ಲಿ ನನ್ನ ತಪ್ಪೇನಿದೆ? ಪ್ರೇಮಿಸೋದೇ ತಪ್ಪೆಂದರೆ ಐ ಡೋಂಟ್ ಕೇರ್. ಅದು ನಮಗೇ ಗೊತ್ತಿಲ್ಲದೆ ಆಗೋ ತಪ್ಪು. ಫಾರ್ ಎಕ್ಸಾಂಪಲ್, ಬೆಳಕು ಹರಿಯೋದು, ಹೂವು ಅರಳೋದು, ಪರಿಮಳ ಪಸರಿಸೋದು, ಬೀಜ ಮೊಳಕೆಯೊಡೆಯೋದು ಯಾರಿಗಾದ್ರೂ ಗೊತ್ತಾಗ್ತದೇನು? ಹಂಗೆ ಪ್ರೇಮಾನೂ.

ಪ್ರೇಮಿಸುವ ಹಕ್ಕು ಬಡವನಿಗೂ ಇದೆ. ಸುಖವಾಗಿರುವುದಕ್ಕೂ ಬರುವ ಸಂಬಳಕ್ಕೂ ಸಂಬಂಧವೇ ಇಲ್ಲ. ಎಡವಿದ ಕಾಲನ್ನೇ ಎಡವೋದು ಅಂತಾರೆ. ಪ್ರೇಮದ ವಿಷಯವೂ ಹಾಗೇನೇನೋ. ಅಲ್ಲಿ ನೋವಾಗುತ್ತೆ. ಇಲ್ಲಿ ನೋವು ಹೋಗುತ್ತೆ ಅಂದ್ಕೋತೀನಿ. ನದಿಯೂ ಬತ್ತಬಹುದು. ಆದರೆ ಪ್ರೇಮ ಎಂದೂ ಬತ್ತದ ಒರತೆ ಕಣೆ. ಒಂದು ಮಾತ ಹೇಳಲೆ? ನನ್ನ ಹೃದಯವೆಂಬ ತಾಜ್‌ಮಹಲ್‌ನಲ್ಲಿ... ಛೆ... ಛೆ... ತಾಜಮಹಲ್ ಬ್ಯಾಡ. ಅದು ಏನಂದರೂ ಗೋರಿಕಣೆ. ನನ್ನ ಹೃದಯದರ ಮನೆಯಲ್ಲಿ... ನಿನ್ನನ್ನು ಛೇ ಈಗೆಲ್ಲಿವೆ ಅರಮನೆ? ನನ್ನ ಹೃದಯ ಮಂದಿರದಲ್ಲಿ ಹುಂ... ಹುಂ... ಮಂದಿರ... ಛೆ... ಕಾಂಟ್ರೋವರ್ಶಿಯಲ್.

ಹೀಗೆ ಏನೇನೋ ಲ್ಯಾಪ್‌ಟಾಪ್‌ನಲ್ಲಿ ಟೈಪಿಸುತ್ತಾ ಹೋದೆ. ಪುನಃ ಮೊದಲಿನಿಂದ ಓದಿದೆ. ಅವಳಿಗೆ ಇಮೇಲ್ ಮಾಡಲು ಮುಜುಗರ. ಸೋತೇನೆಂಬ ಅಭಿಮಾನ. ಸೋಲಬಾರದೆಂಬ ಹಟ. ಹಾಗೆ ಇಟ್ಟುಕೊಳ್ಳಲಾರದ ತಹತಹ ತಡೆಯಲಾಗದೆ ಪತ್ರಿಕೆಯೊಂದಕ್ಕೆ ಇಮೇಲ್ ಮಾಡಿ ಹಗುರಾದೆ.

ಪ್ರತಿಕ್ರಿಯಿಸಿ: **feedback@sudha.co.in**